ಹೊಸಪೇಟೆಯಲ್ಲಿ ಸಣ್ಣ ಅಂಗಡಿಗಳನ್ನು ಒಡೆದು ಹಾಕಿರುವುದು.

೮೬೦. ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸಪೇಟೆ ನಗರಸಭೆಯಿಂದ ಒಟ್ಟು ಸಣ್ಣ ಬಂಕ್‌ಗಳನ್ನು ತೆಗೆಸುಹಾಕಿರುವ ಬಗ್ಗೆ ದಿನಾಂಕ ೧–೧–೮೫ರಿಂದ ೩೧–೧೨–೮೭ರವರೆಗೆ ?

ಆ) ಸಂಬಂಧಪಟ್ಟ ಅವಧಿಯಲ್ಲಿ ಒಟ್ಟು ಗಣನೆ ಮಾಡಿದ ಲೈಸೆನ್ಸ್ ಮತ್ತು ಪರವಾನಿಗೆ ಪಡೆದ ಗುತ್ತಿಗೆದಾರರು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ೩೨೧.

ಆ) ಇಲ್ಲ.

ಹೊಸಪೇಟೆ ನಗರಸಭೆಯ ಬಗ್ಗೆ.

೮೬೩–ಬಿ ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಹೊಸಪೇಟೆ ನಗರಸಭೆಗೆ ಸೇರಿರುವ ಸ್ಥಿರಾಸ್ತಿಯ ಒಟ್ಟು ಸಂಖ್ಯೆ ಮತ್ತು ಖಾಲಿ ನಿವೇಶನಗಳ ಸಂಖ್ಯೆ ?

ಬಿ) ಈ ವರೆಗೆ ಹಂಚಲಾಗಿರುವ ಪಟ್ಟಾಗಳ ಸಂಖ್ಯೆ ?

ಸಿ) ಅಭಿವೃದ್ಧಿ ತೆರಿಗೆ ಮತ್ತು ಅಸೈನ್‌ಮೆಂಟ್ ತೆರಿಗೆ ಸಂದಾಯಮಾಗಿರುವುದು ?

ಡಿ) ಮೇಲ್ಕಂಡವುಗಳು ಕರ್ನಾಟಕ ಮುನಿಸಿಪಲ್ ಕಾಯ್ದೆ ೧೯೬೪ರ ಮತ್ತು ಅಭಿವೃದ್ಧಿ ಪ್ರಾಧಿಕಾರದ ನಿಯಮಗಳ ರೀತ್ಯಾ ಸರಿಯಾಗಿರುತ್ತವೆಯೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಎ) ಸ್ಥಿರಾಸ್ತಿಗಳ ಸಂಖ್ಯೆ ... ೨೬೫.
ಖಾಲಿ ಜಮೀನು ... ೫೮೦ ಸೆಂಟುಗಳು.

ಬಿ) ಒಟ್ಟು ೧೧೬೬ ನಿವೇಶನಗಳು (ವಿವಿಧ ಅಳತೆಯುಳ್ಳ ನಿವೇಶನಗಳು)

ಸಿ) ಅಭಿವೃದ್ಧಿ ತೆರಿಗೆ ... ರೂ. ೩,೬೫,೩೨೭–೨೭.
ಅಪಸೆಟ್ ಪ್ರೈಸ್ ... ರೂ. ೧,೪೧,೪೯೦–೮೦.

ಡಿ) ಸರಿಯಾಗಿರುತ್ತವೆ.

ಕೈಗಾರಿಕಾ ಘಟಕಗಳಿಗೆ ಸಾಲವನ್ನು ಬಿಡುಗಡೆ ಮಾಡುವುದು

೧೧೯೦. ಶ್ರೀ ಮೊಹಮ್ಮದ್ ಲೈಕುದ್ದೀನ್, (ಬಳ್ಳಾರಿ).—ಮಾನ್ಯ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಘಟಕಗಳ ಯೋಜನೆಯಲ್ಲಿ (ಪ್ರಾಜೆಕ್ಟ್) ಒಂದು ಭಾಗವಾದ ಶೇಕಡ ೧೫ರಷ್ಟು ಅಭಿವೃದ್ಧಿ ಸಾಲ, ಶೇಕಡ ೨೫ರಷ್ಟು ಸಹಾಯಧನ, ಇವುಗಳನ್ನು ಬಿಡುಗಡೆ ಮಾಡದೆ ಇರುವುದರಿಂದ ಬೀದರ್ ಜಿಲ್ಲೆಯ ಸಣ್ಣ ಪ್ರಮಾಣದ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕಾ ಘಟಕಗಳು ತೊಂದರೆಗೊಳಗಾಗಿವೆ ಎಂಬುದು ನಿಜವೇ?

ಆ) ಅಭಿವೃದ್ಧಿ ಸಾಲ ಮತ್ತು ಸಹಾಯಧನವನ್ನು ಪಡೆಯಂದೇ ಇರುವ ಘಟಕಗಳ ಸಂಖ್ಯೆ ಎಷ್ಟು ಹಾಗೂ ಬಿಡುಗಡೆ ಮಾಡಬೇಕಾದ ಅಭಿವೃದ್ಧಿ ಸಾಲದ ಹಾಗೂ ಸಹಾಯಧನದ ಮೊತ್ತವೆಷ್ಟು?

ಇ) ಸರ್ಕಾರವು ಅಂತಹ ಘಟಕಗಳಿಗೆ ಸಾಲದ ಹಾಗೂ ಸಹಾಯಧನದ ಮೊತ್ತವನ್ನು ಬಿಡುಗಡೆ ಮಾಡುವುದೇ, ಹಾಗಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾವುದು?

ಈ) ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಹೌದು.

ಆ) ೧. ಕೇಂದ್ರ ಸರಕಾರದ ಸಹಾಯಧನ ;

ಸಣ್ಣ ಪ್ರಮಾಣದ ಘಟಕ ೪೮
ಮೊತ್ತ ರೂ. ೭೮,೫೫,೨೧೦

ಅಭಿವೃದ್ಧಿ ಸಾಲ ;

೨. ಸಣ್ಣ ಪ್ರಮಾಣದ ಘಟಕಗಳು : ೩೫
ಮೊತ್ತ ರೂ. ೩೪,೮೦,೦೦೦-೦೦
೨. ಮಧ್ಯಮ ಪ್ರಮಾಣದ ಘಟಕಗಳು : ಸಂಖ್ಯೆ ೧

ಮೊತ್ತ ರೂ. ೭.೯೦ ಲಕ್ಷ ರೂ.ಗಳು

ಇ) ಹಣಕಾಸು ಪರಿಸ್ಥಿತಿ ಉತ್ತಮಗೊಂಡಾಗ ಹಣ ಬಿಡುಗಡೆ ಮಾಡಲಾಗುವುದು.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಸಭೆಯಲ್ಲಿ ಮಂಡಿಸಲಾದ ಕಾಗದ ಪತ್ರಗಳು

೧. ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು) ಅವರ ಪರವಾಗಿ ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು).—

ಅ) ಭಾರತ ಸಂವಿಧಾನದ ಅನುಚ್ಛೇದದ ೩೫೫(೨)ರ ಮೇರೆಗೆ—

ಕರ್ನಾಟಕ ಜಾಗೃತ ಆಯೋಗದ ೧೯೮೪-೮೫ರ ಹಾಗೂ ೧೯೮೫-೮೬ನೇ ಸಾಲುಗಳ ವಾರ್ಷಿಕ ವರದಿಗಳನ್ನು ಸಭೆಯಲ್ಲಿ ಮಂಡಿಸಿದೆವು.

ಆ) ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ ೧೯೭೪ನೆಯ ೬೯(೨) ಕಲಮಿನ ಮೇರೆಗೆ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ೧೯೮೬-೮೭ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯಲ್ಲಿ ಮಂಡಿಸಿದೆವು.

೨. ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು) —ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿ).—ಅವರ ಪರವಾಗಿ

ಅ) ೧೯೬೪ನೇ ಇಸವಿಯ ಕರ್ನಾಟಕ ಭೂ ಕಂದಾಯ ೧೯೧ (೨) ಕಲಮಿನ ಮೇರೆಗೆ.—

೧. ೧೯೮೬-೮೭ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ೨೪ ಗ್ರಾಮಗಳಿಗೆ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಫೆಬ್ರವರಿ ೨೬ನೇ ದಿನಾಂಕದಂದು ಹೊರಡಿಸಲಾದ ಆರ್.ಡಿ. ೮ ಟಿ.ಆರ್.ಎಂ. ೮೮ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯಲ್ಲಿ ಮಂಡಿಸಿದೆವು.